# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 382
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 10.12.2025
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವ್ಯಕ್ತಿಗತ ಫಲಾನುಭವಿಗಳಿಗೆ ಸರ್ಕಾರಿ ಭೂಮಿ ಮಂಜೂರು ನಿಯಮಗಳನ್ನು ಉಲ್ಲಂಘಿಸಿ ಅಕ್ರಮ-ಸಕ್ರಮ ಅರ್ಜಿ ವಿಲೇವಾರಿಯಲ್ಲಿ ಅಕ್ರಮಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ಕುರಿತು ಸರ್ಕಾರ ಯಾವ ರೀತಿ ಕ್ರಮವಹಿಸಿದೆ: | ರಾಜ್ಯದಲ್ಲಿ ವ್ಯಕ್ತಿಗತ ಫಲಾನುಭವಿಗಳಿಗೆ ಸರ್ಕಾರಿ ಭೂಮಿ ಮಂಜೂರು ನಿಯಮಗಳನ್ನು ಉಲ್ಲಂಘಿಸಿ ಅಕ್ರಮ-ಸಕ್ರಮ ಅರ್ಜಿ ವಿಲೇವಾರಿಯಲ್ಲಿ ಅಕ್ರಮಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.<br><br>1. ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲೂಕಿನಲ್ಲಿ ಕರ್ನಾಟಕ ಭೂ ಕಂದಾಯ ನಿಯಮಾವಳಿಗಳು, 1966 ನಿಯಮ 108 ಎಫ್ ನ್ನು ಉಲ್ಲಂಘಿಸಿ, ಕಳೆದ 10 ವರ್ಷಗಳಿಂದ (2013 ನೇ ಸಾಲಿನಿಂದ 2023 ರ ವರೆಗೆ) ಅಕ್ರಮ ಸಕ್ರಮದಡಿ ಭೂ ಮಂಜೂರಾತಿ ಮಾಡಿರುವ ಪ್ರಕರಣಗಳ ಬಗ್ಗೆ ಸಾರ್ವನಿಕರಿಂದ ಸ್ವೀಕೃತವಾದ ದೂರಿನ ಹಿನ್ನೆಲೆಯಲ್ಲಿ ಸ್ಥಳೀಯ ಕೆ.ಎ.ಎಸ್ ವೃಂದದ (ಉಪವಿಭಾಗಾಧಿಕಾರಿ /ಭೂಸ್ವಾಧೀನಾಧಿಕಾರಿ / MUDA ಆಯುಕ್ತರು / ನಗರಪಾಲಿಕೆ ಅಧಿಕಾರಿಗಳು) ಅಧಿಕಾರಿಗಳ ಮೇಲುಸ್ತುವಾರಿಯಲ್ಲಿ ಕಂದಾಯ ಇಲಾಖಾ ಸಿಬ್ಬಂದಿಗಳನ್ನು ಒಳಗೊಂಡಂತೆ ತಂಡವನ್ನು ರಚನೆಮಾಡಿ ಅಕ್ರಮ ಮಂಜೂರಾತಿ ಪ್ರಕರಣಗಳ ಪಟ್ಟಿಯನ್ನು ಸಿದ್ಧಪಡಿಸಲು ಕ್ರಮ ಜರುಗಿಸುವಂತೆ ಸೂಚಿಸಲಾಗಿದೆ.<br>2. ಚಿಕ್ಕಮಗಳೂರು ಜಿಲ್ಲೆಯ ಕಡೂರು ಮತ್ತು ಮೂಡಿಗೆರೆ ತಾಲ್ಲೂಕು ಗಳಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ -1964ರ ಕಲಂ 94-ಎ ಅಡಿಯಲ್ಲಿ ನೀಡಿರಬಹುದಾದ ಅನಧಿಕೃತ ಭೂಮಂಜೂರಾತಿಗಳನ್ನು ಪರಿಶೀಲಿಸಿ ಅಕ್ರಮವೆಸಗಿರುವ ತಪ್ಪಿತಸ್ಥ ಅಧಿಕಾರಿಗಳನ್ನು ಗುರುತಿಸಲು 15 ಜನ ತಹಸೀಲ್ದಾರ್ ಒಳಗೊಂಡ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ.<br>3. ಹಾಸನ ಜಿಲ್ಲೆ, ಬೇಲೂರು ತಾಲ್ಲೂಕಿನಲ್ಲಿ 2016ನೇ ಸಾಲಿನಿಂದ ಜುಲೈ 2022ರ |

| | | |
|---|---|---|
| | | ಮಾಹೆಯವರೆಗೆ ನಮೂನೆ-53ರ ಬಗರ್ ಹುಕ್ಕುಂ ಅಡಿ ಮಂಜೂರಾದ ಒಟ್ಟು 2142 ಪ್ರಕರಣಗಳಲ್ಲಿ ಲೋಪ ಆಗಿರುವ ಕುರಿತು ಸ್ವೀಕೃತವಾದ ದೂರಿನ ಮೇರೆ ಘನ ಜನ ಪ್ರತಿನಿಧಿಗಳ ನ್ಯಾಯಾಲಯದ ಸಂಖ್ಯೆ:5030/2023 ದಿ:13/09/20240 ಸಿ.ಐ.ಡಿ ತನಿಖೆ ನಡೆಯುತ್ತಿರುತ್ತದೆ. ಪ್ರಸ್ತುತ ಸಿ.ಐ.ಡಿ ತನಿಖೆ ಜಾರಿಯಲ್ಲಿರುತ್ತದೆ. |
| ಆ) | ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕು ವ್ಯಾಪ್ತಿಯಲ್ಲಿ 2000-2025ರ ಅವಧಿಯಲ್ಲಿ ಕೃಷಿ ಉದ್ದೇಶದ ಕೃತಗಳಿಲ್ಲದ ಸರ್ಕಾರಿ ಜಮೀನುಗಳು, ಜಮೀನು ಇದ್ದವರಿಗೇ ಮತ್ತೆ ಭೂ ಮಂಜೂರು ಮಾಡುವ ಮೂಲಕ ದಲ್ಲಾಳಿಗಳ ಒತ್ತಡದಿಂದ ಮತ್ತು ಅಧಿಕಾರಿ, ಸಿಬ್ಬಂದಿಗಳ ನಿರ್ಲಕ್ಷದಿಂದಾಗಿ ಭೂಗಳ್ಳರ ಪಾಲಾಗಿರುವ ಬಗ್ಗೆ ನೀಡಿರುವ ದೂರಿನ ಕುರಿತು ಯಾವ ಕ್ರಮ ವಹಿಸಲಾಗಿದೆ: | ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲೂಕಿನಲ್ಲಿ ಕರ್ನಾಟಕ ಭೂ ಕಂದಾಯ ನಿಯಮಾವಳಿಗಳು, 1966 ನಿಯಮ 108 ಎಫ್ ನ್ನು ಉಲ್ಲಂಘಿಸಿ, ಕಳೆದ 10 ವರ್ಷಗಳಿಂದ (2013 ನೇ ಸಾಲಿನಿಂದ 2023 ರ ವರೆಗೆ) ಅಕ್ರಮ ಸಕ್ರಮದಡಿ ಭೂ ಮಂಜೂರಾತಿ ಮಾಡಿರುವ ಪ್ರಕರಣಗಳ ಬಗ್ಗೆ ಸಾರ್ವನಿಕರಿಂದ ಸ್ವೀಕೃತವಾದ ದೂರಿನ ಹಿನ್ನೆಲೆಯಲ್ಲಿ ಸ್ಥಳೀಯ ಕೆ.ಎ.ಎಸ್ ವೃಂದದ (ಉಪವಿಭಾಗಾಧಿಕಾರಿ /ಭೂಸ್ವಾಧೀನಾಧಿಕಾರಿ / MUDA ಆಯುಕ್ತರು / ನಗರಪಾಲಿಕೆ ಅಧಿಕಾರಿಗಳು) ಅಧಿಕಾರಿಗಳ ಮೇಲುಸ್ತುವಾರಿಯಲ್ಲಿ ಕಂದಾಯ ಇಲಾಖಾ ಸಿಬ್ಬಂದಿಗಳನ್ನು ಒಳಗೊಂಡಂತೆ ತಂಡವನ್ನು ರಚನೆಮಾಡಿ ಅಕ್ರಮ ಮಂಜೂರಾತಿ ಪ್ರಕರಣಗಳ ಪಟ್ಟಿಯನ್ನು ಸಿದ್ಧಪಡಿಸಲು ಕ್ರಮ ಜರುಗಿಸುವಂತೆ ಸೂಚಿಸಲಾಗಿದೆ. |
| ಇ) | ಒಟ್ಟು 14,34,060 ಬಗರ್ ಹುಕುಂ ಅರ್ಜಿಗಳಲ್ಲಿ ಸುಮಾರು 2,93,744 ಅರ್ಜಿಗಳು ಅಧಿಕಾರಿ ಹಂತದಲ್ಲಿ ವಿಲೇವಾರಿಗೆ ಬಾಕಿಯಿರಲು ಕಾರಣವೇನು: ಸದರಿ ಒಟ್ಟು ಅರ್ಜಿಗಳಲ್ಲಿ ಜಮೀನು ಮಂಜೂರು ಮಾಡಿದ, ತಿರಸ್ಕರಿಸಿದ ಮತ್ತು ಕ್ರಮಕ್ಕೆ ಬಾಕಿಯಿರುವ ಅರ್ಜಿಗಳೆಷ್ಟು: ಅವುಗಳನ್ನು ಯಾವಾಗ ವಿಲೇವಾಗಿ ಮಾಡಲಾಗುವುದು: | ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 94-ಎ, 94-ಬಿ ಹಾಗೂ 94-ಎ(4)ರಂತೆ ಬಾಕಿ ಇರುವ ನಮೂನೆ 50,53 ಹಾಗೂ 57ರ ಅರ್ಜಿಗಳನ್ನು ಬಗೈರ್ ಹುಕುಂ ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದ್ದು, ಈ ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ 45 ಎಲ್‌ಜಿಪಿ 2023, ದಿನಾಂಕ:01.12.2023ರಂತೆ ಸೂಚನೆಗಳನ್ನು ನೀಡಲಾಗಿರುತ್ತದೆ. ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ.<br><br>ಬಾಕಿ ಅರ್ಜಿಗಳ ವಿಲೇವಾರಿ ಮಾಡಲು ದಿನಾಂಕ: 26.04.2026 ವರೆಗೆ ಅವಕಾಶ ಕಲ್ಪಿಸಲಾಗಿದೆ. |
| ಈ) | ಸದರಿ ಅರ್ಜಿಗಳನ್ನು ವಿಲೇವಾರಿ ಮಾಡದೇ ತಮ್ಮ ಹಂತದಲ್ಲಿ ಬಾಕಿಯಿಟ್ಟುಕೊಂಡು ಆಯಾಯ ಪ್ರಕರಣದಲ್ಲಿ ಇರುವ ಜಮೀನುಗಳನ್ನು ಕಂದಾಯ ಇಲಾಖೆ ತನ್ನ ಸುಪರ್ಧಿಗೆ ತೆಗೆದುಕೊಳ್ಳದೆ ಜಮೀನು ಅಗತ್ಯವಿರುವ ಸರಕಾರಿ ಇಲಾಖೆಗಳಿಗೆ ಮತ್ತು ಸಾರ್ವಜನಿಕ ಉದ್ದೇಶಗಳಿಗೆ ಜಮೀನು ಅಲಭ್ಯತೆಗೆ ಕಾರಣವಾಗಿರುವ ಪ್ರಕರಣಗಳೆಷ್ಟು: | ರಾಜ್ಯದಲ್ಲಿ ವಿವಿಧ ಸಾರ್ವಜನಿಕ ಉದ್ದೇಶಕ್ಕೆ ಹಾಗೂ ಸರ್ಕಾರಿ ಇಲಾಖೆಗಳಿಗೆ ಸೂಕ್ತ ಸರ್ಕಾರಿ ಜಮೀನನ್ನು ಗುರುತಿಸಿ ಕಾಯ್ದಿರಿಸಲಾಗುತ್ತಿದ್ದು, ಜಮೀನು ಅಲಭ್ಯತೆಗೆ ಕಾರಣವಾಗಿರುವ ಪ್ರಕರಣಗಳು ಇರುವುದಿಲ್ಲ. |

| | | |
|---|---|---|
| ಉ) | ವಿಸ್ತೀರ್ಣ ಮಿತಿ ಮೀರಿರುವುದು, ನಗರ ವ್ಯಾಪ್ತಿಯಲ್ಲಿರುವುದು, ಕೃಷಿ ಕೃತಾವಳಿ ಇಲ್ಲದಿರುವುದು, ಇತ್ಯಾದಿ ಪರಿಷ್ಕೃತ ನಿಯಮಗಳನ್ವಯ ಅಕ್ರಮ ಸಕ್ರಮ ಯೋಜನೆಯಡಿ ಬಗರ್ ಹುಕುಂ ಅರ್ಜಿ ತಿರಸ್ಕರಿಸಿದ ಪ್ರಕರಣಗಳಲ್ಲಿ ಆಕ್ರಮಿತ ಭೂಮಿಯನ್ನು ಕಾಲಮಿತಿ ನಿಗಧಿಪಡಿಸಿ ಇಲಾಖೆಯ ಸುಪರ್ಧಿಗೆ ತೆಗೆದುಕೊಳ್ಳದಿರಲು ಕಾರಣವೇನು: ಈ ಜಮೀನುಗಳನ್ನು ಸುಪರ್ಧಿಗೆ ತೆಗೆದುಕೊಳ್ಳಲು ಸರ್ಕಾರ ಯಾವಾಗ ಕ್ರಮವಹಿಸುವುದು? | ಅಕ್ರಮ-ಸಕ್ರಮ ಯೋಜನೆಯಡಿ ಸ್ವೀಕೃತವಾದ ಅರ್ಜಿಗಳ ಪೈಕಿ ಅನರ್ಹ ಪ್ರಕರಣಗಳನ್ನು ತಿರಸ್ಕರಿಸುವ ಅಧಿಕಾರವನ್ನು ಕರ್ನಾಟಕ ಭೂ ಮಂಜೂರಾತಿ ನಿಯಮ 1966ರ ನಿಯಮ 108-ಸಿ 108-ಸಿಸಿ ಹಾಗೂ 108-ಸಿಸಿಸಿ ರಡಿ ಜಿಲ್ಲಾಧಿಕಾರಿಗಳಿಗೆ ನೀಡಲಾಗಿರುತ್ತದೆ. ತಿರಸ್ಕರಿಸಲಾದ ಅನರ್ಹ ಅರ್ಜಿಗಳ ಪ್ರಕರಣಗಳಲ್ಲಿ ಸರ್ಕಾರಿ ಜಮೀನು ಒತ್ತುವರಿ ಮಾಡಿಕೊಂಡು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ವ್ಯಕ್ತಿಗಳ ಅಕ್ರಮಿತ ಭೂಮಿಯನ್ನು ಕಂದಾಯ ಇಲಾಖೆಯ ವಶಕ್ಕೆ ಪಡೆದುಕೊಳ್ಳಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಆರ್‌ಡಿ 181ಎಲ್‌ಜಿಕ್ಯೂ 2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು